69

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾಗರಾಜು ರವರು ನಿಯಮ-72ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಹೇಳಿಕೆ.**

**ಸೂಚನೆ:** ಕಾಡುಗೊಲ್ಲ ಜನಾಂಗವು ಕರ್ನಾಟಕದ ಆಧಿಮ ಹಾಗೂ ಪ್ರಾಚೀನ ಬುಡಕಟ್ಟುಗಳಲ್ಲಿ ಒಂದಾಗಿದ್ದು, ಈ ಜನಾಂಗವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಹಾಗೂ ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದಿರುವ ಜನಾಂಗವಾಗಿದ್ದು, ಸದರಿ ಜನಾಂಗವು ಕರ್ನಾಟಕ ರಾಜ್ಯದ 12 ಜಿಲ್ಲೆಗಳ ಸುಮಾರು 40 ತಾಲ್ಲೂಕುಗಳಲ್ಲಿ ತಮ್ಮದೇ ಆದ ಬುಡಕಟ್ಟು ಸಂಸ್ಕೃತಿಯೊಂದಿಗೆ ಸುಮಾರು 1250ಕ್ಕೂ ಹೆಚ್ಚಿನ ಗೊಲ್ಲರ ಹಟ್ಟಿಗಳಲ್ಲಿ ವಾಸವಾಗಿರುತ್ತಾರೆ. ಈ ಮೊದಲು "ಕಾಡುಗೊಲ್ಲ" ಜಾತಿಯನ್ನು ಪ್ರವರ್ಗ-1ರಡಿಯಲ್ಲಿ ಬರುವ "ಗೊಲ್ಲ" ಎಂಬುದಾಗಿ ಗುರುತಿಸಲಾಗುತ್ತಿತ್ತು. ಹಾಗೆಯೇ "ಗೊಲ್ಲ" ಎಂಬುವುದಾಗಿ ಜಾತಿ ಪ್ರಮಾಣ ಪತ್ರವನ್ನು ನೀಡಲಾಗುತ್ತಿತ್ತು. ಈ ಸಮುದಾಯದ ಆಚಾರ, ವಿಚಾರಗಳು, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ಸರ್ಕಾರವು ಮೈಸೂರು ವಿಶ್ವವಿದ್ಯಾಲಯದ ಮಾನವ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀಮತಿ ಅನ್ನಪೂರ್ಣಮ್ಮ ರವರಿಂದ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಂಡು ಸದರಿಯವರ ವರದಿಯ ಮೇರೆಗೆ ಘನ ಸರ್ಕಾರವು ತನ್ನ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002 ರಲ್ಲಿ ಭಾರತದ ಸಂವಿಧಾನದ ಅನುಚ್ಛೇದ 15(4) ರಂತೆ ಮತ್ತು 16(4) ರಂತೆ ಪ್ರವರ್ಗ-1 ರ ಜಾತಿಗಳ ಪಟ್ಟಿಯಲ್ಲಿ ಉಲ್ಲೇಖ -1 ರ ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಹಿಂವಕ 328 ಬಿಸಿಎ 2017, ದಿನಾಂಕ:29.01.2018ರಂತೆ ಕ್ರಮ ಸಂಖ್ಯೆ: 86(ಡಬ್ಲ್ಯೂ) ನಂತರ, ಕ್ರಮಸಂಖ್ಯೆ: 86(ಎಕ್ಸ್)ರಲ್ಲಿ **"ಕಾಡುಗೊಲ್ಲ"** 86(ವೈ)ರಲ್ಲಿ **"ಹಟ್ಟಿಗೊಲ್ಲ"** ಎಂಬ ಪರ್ಯಾಯ ಪದಗಳನ್ನು ಸೇರ್ಪಡೆ ಮಾಡಿ ಆದೇಶಿಸಿದ್ದು, ಉಲ್ಲೇಖ-2 ರಲ್ಲಿನ ಸರ್ಕಾರ ಆದೇಶ ಸಂಖ್ಯೆ: ಹಿಂವಕ 185 ಬಿಸಿಎ 2018, ದಿನಾಂಕ:13.07.2018ರಲ್ಲಿ "ಕಾಡುಗೊಲ್ಲ" ಜಾತಿಯ ಹೆಸರನ್ನು ಕಂದಾಯ ಇಲಾಖೆಯ ನಾಡ ಕಛೇರಿಯ ಜಾಲತಾಣದ ಪ್ರವರ್ಗ-1 ಜಾತಿಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿ ಆದೇಶಿಸಿರುತ್ತದೆ. ಪ್ರಸ್ತುತ "ಕಾಡುಗೊಲ್ಲ" ಜಾತಿಯನ್ನು ಸರ್ಕಾರವು ಪ್ರವರ್ಗ–1ರಡಿಯಲ್ಲಿ ಪ್ರತ್ಯೇಕ ಜಾತಿ ಎಂಬುವುದಾಗಿ ಗುರುತಿಸಿ ಜಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿ ಆದೇಶಿಸಿದ್ದು, ಸದರಿ ಜನಾಂಗದವರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ ಪಿ 5 ಜಿಪಸ 95(1) ಬೆಂಗಳೂರು, ದಿನಾಂಕ: 13.01.1995 ರನ್ವಯ ಚುನಾವಣಾ ಗೆಜೆಟ್‌ನಲ್ಲಿ ಹಿಂದುಗಳಿದ ವರ್ಗಗಳ ಪ್ರವರ್ಗ-ಎ&ಬಿ ಚುನಾವಣಾ ಜಾತಿ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವುದಿಲ್ಲ. ಈ ತಾಂತ್ರಿಕ ಕಾರಣಗಳಿಂದ ಕಾಡುಗೊಲ್ಲ ಜನಾಂಗದ ಅಭ್ಯರ್ಥಿಗಳು ಸ್ಥಳೀಯ ಸಂಸ್ಥೆಗಳಾದ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಚುನಾವಣೆಗಳು ಸೇರಿದಂತೆ ಬಿಬಿಎಂಪಿ ಹಾಗೂ ಇತರೆ ನಗರ

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧೆ ಮಾಡುವ ಅವಕಾಶದಿಂದ ವಂಚಿತರಾಗುತ್ತಿರುತ್ತಾರೆ. "ಕಾಡುಗೊಲ್ಲ" ಜನಾಂಗವನ್ನು ಹಿಂದುಳಿದ ವರ್ಗಗಳ ಪ್ರವರ್ಗ-ಎ&ಬಿ (ಬಿಸಿಎಂ-ಎ)ರಡಿಯಲ್ಲಿ ಜಾತಿ ಪ್ರಮಾಣ ಪತ್ರವನ್ನು ನೀಡಲು ವಿಳಂಬವಾಗುತ್ತಿರುವ ಬಗ್ಗೆ ಮಾಹಿತಿ ನೀಡುವ ಕುರಿತು ನಿಯಮ – 72ರಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:** ಭಾರತ ಸಂವಿಧಾನದ ಅನುಚ್ಛೇದ 15(4)ರನ್ವಯ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಹಾಗೂ ಸಂವಿಧಾನದ ಅನುಚ್ಛೇದ 16(4)ರನ್ವಯ ಸರ್ಕಾರ ಹಾಗೂ ಸಾರ್ವಜನಿಕ ನೇಮಕಾತಿಗಳಲ್ಲಿ ಮೀಸಲಾತಿ ಪಡೆಯಲು ಸರ್ಕಾರ ಅಧಿಸೂಚಿಸಿರುವ ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಹಿಂವಕ 328 ಬಿಸಿಎ 2017, ದಿನಾಂಕ:29.01.2018ರ ಆದೇಶದಲ್ಲಿ ಕಾಡುಗೊಲ್ಲ ಮತ್ತು ಹಟ್ಟಿಗೊಲ್ಲ ಜಾತಿಗಳನ್ನು ಪ್ರವರ್ಗ-1ರಲ್ಲಿ ಸೇರಿಸಿ ಆದೇಶಿಸಿರುತ್ತದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಅಧಿಸೂಚಿಸಿರುವ ಹಿಂದುಳಿದ ಜಾತಿಗಳಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಮೂರೂ ಹಂತದ ಸಂಸ್ಥೆಗಳನ್ನೊಳಗೊಂಡಂತೆ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಮೀಸಲಾತಿಗೆ ಅರ್ಹರಿರುವ ಜಾತಿಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸರ್ಕಾರದ ಅಧಿಸೂಚನೆ ಸಂಖ್ಯೆ:RDP 5 ZPS 1995(i), ದಿನಾಂಕ:13.01.1995ರಲ್ಲಿ ಪ್ರಕಟಿಸಿರುತ್ತದೆ. ಈ ಅಧಿಸೂಚನೆಯ ಪ್ರವರ್ಗ-ಎ ರಡಿ ಕಾಡುಗೊಲ್ಲ ಮತ್ತು ಹಟ್ಟಿಗೊಲ್ಲ ಜಾತಿಗಳನ್ನು ಸೇರಿಸುವ ಪ್ರಸ್ತಾವನೆಯ ಪ್ರಕ್ರಿಯೆಯು ಸರ್ಕಾರದ ಪರಿಶೀಲನೆಯಲ್ಲಿದೆ.

**ಸಂಖ್ಯೆ: ಗ್ರಾಅಪಂರಾ 40 ಜಿಪಸ 2025**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.